**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಸ್ವರ್ಣ.ಜಿ.ಎಸ್. | | ಪಿಡಬ್ಲೂ - 18 |
| ಗಂಡನ ಹೆಸರು | - ನಂಜೇಗೌಡ | | ಸಿಡಬ್ಲೂ -39 |
| ವಯಸ್ಸು | - 42 ವರ್ಷ | | |
| ಉದ್ಯೋಗ | - ಆರಕ್ಷಕ ನಿರೀಕ್ಷಕರು, ಹಾಲನಹಳ್ಳಿ ಪೊಲೀಸ್ ಠಾಣೆ , ಮೈಸೂರು | | |
| ವಾಸ ಸ್ಥಳ | - ಮೈಸೂರು | | |

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ದಿನಾಂಕಃ 03-06-2021 ರಿಂದ ದಿನಾಂಕಃ 18-11-2022 ರವರೆಗೆ ನಾನು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್

ಠಾಣೆಯಲ್ಲಿ ಆರಕ್ಷಕ ನಿರೀಕ್ಷಕಳಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿಃ 18-11-2021 ರಂದು ನಾನು ಠಾಣೆಯಲ್ಲಿದ್ದ ಸಮಯದಲ್ಲಿ ಸಂಜೆ ಸುಮಾರು 7.30 ಗಂಟೆಗೆ ಪ್ರಾಸಾ.9 ವಾಸುದೇವ್‌ರವರು ಠಾಣೆಗೆ ಕರೆ ಮಾಡಿ ತಮ್ಮ ಎಸ್ಟೇಟಿನ ಕೂಲಿ ಲೈನಿನಲ್ಲಿ ಶೇಷಪ್ಪ ಎಂಬುವವರ ಕೊಲೆಯಾಗಿದ್ದಾಗಿ ತಿಳಿಸಿದರು. ನಾನು ಕೂಡಲೇ ಸಿಬ್ಬಂದಿಯೊಂದಿಗೆ ಕಬ್ಬಿನಹಳ್ಳಿ ಗ್ರಾಮದಲ್ಲಿರುವ ಪ್ರಾಸಾ.9 ರವರ ಕಬ್ಬಿನಹಳ್ಳಿ ಎಸ್ಟೇಟಿನ ಕೂಲಿಲೈನಿಗೆ ಭೇಟಿ ನೀಡಿದೆನು. ಆಗ ಸಮಯ ಸಂಜೆ ಸುಮಾರು 8 ರಿಂದ 8.15 ಗಂಟೆಯಾಗಿತ್ತು. ಪ್ರಾಸಾ.9 ರವರು ತಿಳಿಸಿದ ಕೂಲಿ ಲೈನ್ ಮನೆಯ ಹತ್ತಿರ ಹೋದೆನು. ಸದರಿ ಮನೆಯ ಬಾಗಿಲಿಗೆ ಬೀಗವನ್ನು ಹಾಕಿರಲಿಲ್ಲ. ನಾನು ಬಾಗಿಲನ್ನು ತಳ್ಳಿಕೊಂಡು ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಒಳಭಾಗದಲ್ಲಿ ಮೊದಲಿಗೆ ಚಪ್ಪಲಿಗಳನ್ನು ಬಿಡುವ ಒಂದು ಕೊಠಡಿ ಇತ್ತು, ಸದರಿ ಕೊಠಡಿಯ ನಂತರದಲ್ಲಿ ಇನ್ನೊಂದು ಕೊಠಡಿ ಇತ್ತು. ಸದರಿ ಕೊಠಡಿಯಲ್ಲಿ ಒಬ್ಬ ವ್ಯಕ್ತಿಯ ಮೃತದೇಹ ರಕ್ತದ ಮಡುವಿನಲ್ಲಿ ಅಂಗಾಂತವಾಗಿ ಬಿದ್ದಿರುವುದು ಕಂಡುಬಂತು. ಮೇಲ್ನೋಟಕ್ಕೆ ಯಾರೋ ಯಾವುದೋ ಆಯುಧದಿಂದ ಚುಚ್ಚಿ ಕೊಲೆ ಮಾಡಿದ್ದಾಗಿ ಕಂಡುಬಂತು. ನಂತರ ಮೃತನ ತಂದೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಆತನಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದಾಗ ತಾನು ಸಕಲೇಶಪುರದಲ್ಲಿ ಇರುವುದಾಗಿ ತಿಳಿಸಿ ಕೂಡಲೇ ಬರಲು ಸಾಧ್ಯವಾಗುವುದಿಲ್ಲ,

ಮಾರನೆ ದಿನ ಬಂದು ದೂರು ನೀಡುತ್ತೇನೆ ಎಂದು ತಿಳಿಸಿದರು. ಅದರಿಂದ ನಾನು ಸಿಬ್ಬಂದಿಗಳನ್ನು ಶವದ ಬೆಂಗಾವಾಲಿಗೆ ನೇಮಿಸಿ ಠಾಣೆಗೆ ವಾಪಸ್ ಬಂದೆನು.

3. ದಿಃ 19-11-2021 ರಂದು ಮೃತರ ತಂದೆಯಾದ ಫ್ರಾಸಾ.2 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಫ್ರಾಸಾ.16 ರವರು ಪ್ರಕರಣವನ್ನು ದಾಖಲಿಸಿ ಕಡತವನ್ನು ತನಿಖೆಗಾಗಿ ನನಗೆ ನೀಡಿರುತ್ತಾರೆ.

4. ಅದೇ ದಿನ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು. ಸ್ಥಳಕ್ಕೆ ಫ್ರಾಸಾ.1 ಮತ್ತು ಚಾಸಾ.5 ರವರಿಗೆ ನೋಟೀಸನ್ನು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡೆನು. ಸದರಿ ನೋಟೀಸುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.1 ಮತ್ತು ಪಿ.11 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಮತ್ತು ಪಿ.11(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.9 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಪರಿಶೀಲಿಸಿದೆನು. ಸದರಿ ಮನೆಯ ಅಡುಗೆ ಮನೆಯಲ್ಲಿ ಬಿದ್ದಿದ್ದ ರಕ್ತವನ್ನು ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಶೇಖರಿಸಿದೆನು. ಮೃತ ದೇಹ ಬಿದ್ದಿದ್ದ ಸ್ಥಳದಲ್ಲಿ ಇದ್ದ ರಕ್ತವನ್ನು ಹತ್ತಿಯಿಂದ ಇನ್ನೊಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಶೇಖರಿಸಿದೆನು. ಗೋಡೆಯ ಮೇಲೆ ಚಿಮ್ಮಿದ್ದ ರಕ್ತವನ್ನು ಕೆರೆದು ಮತ್ತೊಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಸಂಗ್ರಹಿಸಿದೆನು. ಸುಣ್ಣ ಹೊಡೆದ ಗೋಡೆಯ ಮೇಲೆ ಇದ್ದ ಖಾಲಿ ಮಣ್ಣನ್ನು ಕೆರೆದು

ಮತ್ತೊಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಮಾದರಿಗಾಗಿ ಸಂಗ್ರಹಿಸಿದೆನು. ಸದರಿ ಡಬ್ಬಿಗಳ ಮುಚ್ಚಳವನ್ನು ಹಾಕಿ ಅವುಗಳನ್ನು ಬಿಳಿಯ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ P ಎಂಬ ಅಕ್ಷರದಿಂದ ಸೀಲ್ ಮಾಡಿದೆನು. ಮೃತ ದೇಹ ಬಿದ್ದಿದ್ದ ಸ್ಥಳದಿಂದ ಅಡುಗೆ ಮನೆಗೆ ಹೋಗುವ ಬಾಗಿಲಿನ ನೆಲದಲ್ಲಿ ಹಾಕಿದ್ದ ರಕ್ತದ ಕಲೆಗಳಿದ್ದ ಬಿಳಿ ನೀಲಿ ಮಿಶ್ರ ಬಣ್ಣದ ಒಂದು ಹರಿದ ಪ್ಲಾಸ್ಟಿಕ್ ಚೀಲ, ಮೃತ ದೇಹದ ಪಕ್ಕದಲ್ಲಿ ಬಿದ್ದಿದ್ದ ಮಾಸಲು ಬಿಸ್ಕೇಟ್ ಬಣ್ಣದ ರಕ್ತದ ಕಲೆಗಳಿದ್ದ ಅರ್ಧ ತೋಳಿನ ಟೀ ಶರ್ಟು ಹಾಗೂ ಮಾಸಲು ಸಿಮೆಂಟ್ ಬಣ್ಣದ ರಕ್ತದ ಕಲೆಯಿದ್ದ ಒಂದು ಬನಿಯನನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಬಾಯಿಯನ್ನು ದಾರದಿಂದ ಹೊಲೆದು ಅರಗಿನಿಂದ P ಎಂಬ ಅಕ್ಷರದ ಸೀಲನ್ನು ಹಾಕಿ ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡೆನು. ಅವುಗಳ ಮೇಲೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿದೆನು. ಆ ಬಗ್ಗೆ ಬೆಳಿಗ್ಗೆ 9.30 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ಫ್ರಾಸಾ.9, ಫ್ರಾಸಾ.1 ಮತ್ತು ಚಾಸಾ.5 ರವರ ಮತ್ತು ದಸ್ತುರುದಾರರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ನನ್ನ ಸೂಚನೆಯ ಮೇರೆಗೆ ಫ್ರಾಸಾ.14

ರವರು ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.3 ರಿಂದ ಪಿ.5 ಎಂದು ಗುರುತಿಸಲಾಗಿರುತ್ತದೆ.

5. ಠಾಣೆಗೆ ಹಿಂತಿರುಗಿ ಮೇಲೆ ಹೇಳಿದ ವಸ್ತುಗಳನ್ನು ಮಾಲುಪಟ್ಟಿ ಸಂಃ 369/2021 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.39 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಮು.ಮಾ.1 ರಿಂದ 7 ರ ಮೇಲೆ ಅಂಟಿಸಲಾಗಿರುವ ಚೀಟಿಗಳ ಮೇಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1(ಸಿ) ರಿಂದ ಮು.ಮಾ.7(ಸಿ) ಎಂದು ಗುರುತಿಸಲಾಯಿತು.

6. ನಂತರ ಶವ ತನಿಖೆಗಾಗಿ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಚಾಸಾ.30 ರವರ ಬೆಂಗಾವಾಲಿನಲ್ಲಿ ಕಳುಹಿಸಿದೆನು. ನಂತರ ನಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿದೆನು. ಅಲ್ಲಿಗೆ ಪ್ರಾಸಾ.6, ಚಾಸಾ.4 ಮತ್ತು ಚಾಸಾ.6 ರವರನ್ನು ಬರಮಾಡಿಕೊಂಡು ಶವ ಪಂಚನಾಮೆಗೆ ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿದೆನು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ. ಸದರಿ

ನೋಟೀಸು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು.

7. ಸದರಿ ಪಂಚರ ಸಮಕ್ಷಮ ಮಧ್ಯಾಹ್ನ 12.30 ಗಂಟೆಯಿಂದ 2.30 ಗಂಟೆಯವರೆಗೆ ಶವ ತನಿಖೆಯನ್ನು ನಡೆಸಿ ಆ ಬಗ್ಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿದೆನು. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.9 ಮತ್ತು ಪಿ.10 ಎಂದು ಗುರುತಿಸಲಾಗಿರುತ್ತದೆ.

8. ಶವ ತನಿಖಾ ಕಾಲದಲ್ಲಿ ಮೃತನ ಮೈಮೇಲೆ ಕಂಡುಬಂದ ಗಾಯಗಳ ವಿವರಗಳನ್ನು ಮತ್ತು ಆತನ ಮೈಮೇಲೆ ಇದ್ದ ಬಟ್ಟೆಗಳ ವಿವರಗಳನ್ನು ಶವ ತನಿಖಾ ವರದಿಯಲ್ಲಿ ನಮೂದು ಮಾಡಿದ್ದೇನೆ. ಆ ಸಮಯದಲ್ಲಿ ಮೃತನ ರಕ್ತ ಸಂಬಂಧಿಕರಾದ ಫ್ರಾಸಾ.3, ಚಾಸಾ.7 ಮತ್ತು ಚಾಸಾ.9 ಮತ್ತು ಇತರೆ ಸಾಕ್ಷಿದಾರರಾದ ಫ್ರಾಸಾ.4 ಮತ್ತು ಚಾಸಾ.11 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ನಂತರ ಮರಣೋತ್ತರ ಪರೀಕ್ಷೆಯನ್ನು ನಡೆಸಿಕೊಡುವಂತೆ ಫಾರಂ 146 ನ್ನು ಭರ್ತಿ

ಮಾಡಿ ವರದಿಯೊಂದಿಗೆ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನೀಡಿದೆನು. ಸದರಿ ವರದಿ ಮತ್ತು ನಮೂನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.40 ಮತ್ತು 41 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.40(ಎ), 40(ಬಿ) ಮತ್ತು ಪಿ.41(ಎ) ಎಂದು ಗುರುತಿಸಲಾಯಿತು.

9. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಫ್ರಾಸಾ.2 ರವರ ವಶಕ್ಕೆ ನೀಡಿ ರಸೀದಿಯನ್ನು ಪಡೆದುಕೊಂಡು ಠಾಣೆಗೆ ಹಿಂದಿರುಗಿದೆನು. ಸದರಿ ರಸೀದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

10. ಆರೋಪಿಯ ಪತ್ತೆಗಾಗಿ ಚಾಸಾ.26 ಮತ್ತು 27 ರವರನ್ನು ನೇಮಿಸಿ ಕಳುಹಿಸಿದೆನು. ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾಸಾ.9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ದಿಃ 20-11-2021 ರಂದು ಬೆಳಿಗ್ಗೆ 7 ಗಂಟೆಗೆ ಚಾಸಾ.26 ಮತ್ತು ಚಾಸಾ.27 ರವರು ಆರೋಪಿಯನ್ನು ಕಂಚುಗಲ್ ಗ್ರಾಮದಲ್ಲಿ ವಶಕ್ಕೆಪಡೆದು ಬೆಳಿಗ್ಗೆ 9 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ನನ್ನ ಮುಂದೆ ಹಾಜರುಪಡಿಸಿದರು. ಆ ಬಗ್ಗೆ ಚಾಸಾ.27 ರವರು ವರದಿ ನೀಡಿದರು. ಸದರಿ ವರದಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.42 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು.

11. ನಂತರ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಬಂಧಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿದೆನು. ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕಬ್ಬಿನಹಳ್ಳಿ ರಮೇಶಗೌಡರ ತೋಟದ ಕೂಲಿ ಲೈನಿಗೆ ಕರೆದುಕೊಂಡು ಹೋದರೆ ನಾನು ಶೇಷಪ್ಪನನ್ನು ಕೊಲೆ ಮಾಡಿದ ಸ್ಥಳ, ಕೊಲೆ ಮಾಡಲು ಬಳಸಿದ ಕತ್ತಿ ಹಾಗೂ ಚಾಕು ಮತ್ತು ಕೊಲೆ ಮಾಡುವ ಸಮಯದಲ್ಲಿ ನಾನು ಧರಿಸಿದ್ದ ರಕ್ತವಾಗಿದ್ದ ಬಟ್ಟೆಗಳನ್ನು ಇಟ್ಟಿರುವ ಸ್ಥಳವನ್ನು ತೋರಿಸುತ್ತೇನೆ " ಎಂದು ನುಡಿದಿರುತ್ತಾನೆ. ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.43 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು. ಅದರಲ್ಲಿರುವ ಆರೋಪಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.43(ಬಿ) ಎಂದು ಗುರುತಿಸಲಾಯಿತು.

12. ನಂತರ ಆರೋಪಿಯನ್ನು ಕರೆದುಕೊಂಡು ಜೀಪಿನಲ್ಲಿ ಠಾಣೆಯಿಂದ ಹೊರಟು ಹಿರೇಕೊಳಲೆ ಗ್ರಾಮ ಪಂಚಾಯ್ತಿಗೆ ಹೋದೆನು. ಸದರಿ ಪಂಚಾಯ್ತಿಯ ಪಿ.ಡಿ.ಒ. ರವರನ್ನು ಕುರಿತು ಪಂಚನಾಮೆ ಕ್ರಮವನ್ನು ಜರುಗಿಸಲು ಇಬ್ಬರು ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸುವಂತೆ ಕೋರಿದೆನು. ಅದರ ಮೇರೆಗೆ ಪಿ.ಡಿ.ಒ. ರವರು ಅವರ ಕಛೇರಿಯ ಬಿಲ್ ಕಲೆಕ್ಟರ್, ಗ್ರಂಥಾಲಯ ಮೇಲ್ವಿಚಾರಕರಾದ ಪ್ರಾಸಾ.7 ಚಂದ್ರಶೇಖರ್

ಮತ್ತು ಚಾಸಾ.13 ಅರುಣಕುಮಾರರವರನ್ನು ಸೂಚಿಸಿ ಕಳುಹಿಸಿಕೊಟ್ಟ ಮೇರೆಗೆ ನಾನು ಅವರಿಗೆ ಆರೋಪಿಯನ್ನು ಪರಿಚಯಿಸಿ ಪಂಚರನ್ನಾಗಿ ಸಹಕರಿಸುವಂತೆ ಕೋರಿ ನೋಟೀಸನ್ನು ಜಾರಿ ಮಾಡಿದೆನು, ಅದಕ್ಕೆ ಅವರು ಒಪ್ಪಿರುತ್ತಾರೆ. ಸದರಿ ನೋಟೀಸುಗಳನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳ ಪೈಕಿ ಒಂದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು, ಮತ್ತೊಂದನ್ನು ಈಗ ನಿಪಿ.44 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.14(ಬಿ) ಮತ್ತು ಪಿ.44(ಎ) ಎಂದು ಗುರುತಿಸಲಾಯಿತು.

13. ನಂತರ ಆರೋಪಿ ಮತ್ತು ಪಂಚರನ್ನು ಕರೆದುಕೊಂಡು ಜೀಪಿನಲ್ಲಿ ಕಬ್ಬಿನಹಳ್ಳಿ ಎಸ್ಟೇಟಿಗೆ ಹೋದೆನು. ಅಲ್ಲಿಂದ ಆರೋಪಿ ನನ್ನನ್ನು ಮತ್ತು ಪಂಚರನ್ನು ಸದರಿ ಎಸ್ಟೇಟಿನ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅದೇ ಮನೆಯಲ್ಲಿ ತಾನು ಶೇಷಪ್ಪನನ್ನು ಕೊಲೆ ಮಾಡಿದ್ದಾಗಿ ತಿಳಿಸಿ ಸದರಿ ಮನೆಯ ಅಡುಗೆ ಮನೆಯಲ್ಲಿ ತಾನು ಶೇಷಪ್ಪನಿಗೆ ಕತ್ತಿಯಿಂದ ಹೊಡೆದು ಕೊಲೆ ಮಾಡಿ, ನಂತರ ಆತನನ್ನು ನಡುಮನೆಗೆ ಎಳೆದುಕೊಂಡು ಬಂದು ಚಾಕುವಿನಿಂದ ಚುಚ್ಚಿದ ಜಾಗ ಅದೇ ಎಂದು ನಡುಮನೆಯಲ್ಲಿ ಸ್ಥಳವನ್ನು ತೋರಿಸಿದನು. ನಂತರ ಆರೋಪಿ ಅಡುಗೆ ಮನೆಯಲ್ಲಿ ತಾನು ಶೇಷಪ್ಪನಿಗೆ ಕತ್ತಿಯಿಂದ ಹೊಡೆದ ಸ್ಥಳವನ್ನು ತೋರಿಸಿದನು. ನಂತರ ತಾನು ಕೃತ್ಯಕ್ಕೆ ಬಳಸಿದ ಕತ್ತಿ ಮತ್ತು ಚಾಕುವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಅದನ್ನು

ಯಾರಿಗೂ ಕಾಣದಂತೆ ಮನೆಯ ಹಿಂಭಾಗದ ಸೂರಿನಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿ ಅಡುಗೆ ಮನೆಗೆ ಹೊಂದಿಕೊಂಡಿರುವ ಬಾಗಿಲಿನ ಮುಖಾಂತರ ಹೊರಗೆ ಹೋಗಿ ಸೂರಿನ ಹೆಂಚಿನ ಕೆಳಗೆ ಇಟ್ಟಿದ್ದ ಒಂದು ಬಿಳಿ ಪ್ಲಾಸ್ಟಿಕ್ ಚೀಲವನ್ನು ತೆಗೆದು ಅದರಲ್ಲಿ ಸುತ್ತಿಟ್ಟಿದ್ದ ಕತ್ತಿ ಮತ್ತು ಚಾಕುವನ್ನು ತೋರಿಸಿ ಅದೇ ಕತ್ತಿಯಿಂದ ತಾನು ಶೇಷಪ್ಪನ ತಲೆ, ಮುಖ ಮತ್ತು ಕತ್ತಿಗೆ ಕಡಿದಿದ್ದಾಗಿ ಮತ್ತು ಅದೇ ಚಾಕುವಿನಿಂದ ಶೇಷಪ್ಪನ ಹೊಟ್ಟೆಗೆ ಚುಚ್ಚಿದ್ದಾಗಿ ಮೇಲೆ ಹೇಳಿದ ಪಂಚರ ಸಮಕ್ಷಮ ತಿಳಿಸಿ ಹಾಜರುಪಡಿಸಿದನು. ಸದರಿ ಕತ್ತಿಯ ಮೇಲೆ ರಕ್ತದ ಕಲೆಗಳು ಇರುವುದು ಕಂಡುಬಂತು. ನಂತರ ಆರೋಪಿ ತಾನು ಕೃತವೆಸಗಿದ್ದ ಕಾಲದಲ್ಲಿ ಧರಿಸಿದ್ದ ಬಟ್ಟೆಗಳಿಗೆ ರಕ್ತವಾಗಿದ್ದರಿಂದ ತಾನು ಅವುಗಳನ್ನು ಬಿಚ್ಚಿ ಒಂದು ಬ್ಯಾಗಿನಲ್ಲಿ ಹಾಕಿ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಇಟ್ಟಿರುವುದಾಗಿ ತಿಳಿಸಿ ಸದರಿ ಬಚ್ಚಲು ಮನೆಯ ಹಿಂಭಾಗದಲ್ಲಿಟ್ಟಿದ್ದ ಸದರಿ ಬಟ್ಟೆಗಳನ್ನು ತೆಗೆದು ಮೇಲೆ ಹೇಳಿದ ಪಂಚರ ಸಮಕ್ಷಮ ಹಾಜರುಪಡಿಸಿದ್ದು ಅವುಗಳನ್ನು ಪರಿಶೀಲಿಸಲಾಗಿ ಒಂದು ಮಾಸಲು ಬಿಸ್ಕೇಟ್ ಬಣ್ಣದ ತುಂಬು ತೋಳಿನ ಶರ್ಟು ಮತ್ತು ಕಂದು ಬಣ್ಣದ ಪ್ಯಾಂಟ್ ಆಗಿದ್ದು ಅವುಗಳ ಮೇಲೆ ರಕ್ತದ ಕಲೆಯಾಗಿರುವುದು ಕಂಡುಬಂತು. ಮೇಲೆ ಹೇಳಿದ ಕತ್ತಿ, ಚಾಕು, ಶರ್ಟು ಮತ್ತು ಪ್ಯಾಂಟಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಬಾಯಿಯನ್ನು ಹೊಲೆದು ಅವುಗಳ ಮೇಲೆ ಅರಗಿನಿಂದ P ಎಂಬ ಅಕ್ಷರದಿಂದ ಸೀಲ್ ಮಾಡಿ ಅವುಗಳ ಮೇಲೆ ಪಂಚರ

ಮತ್ತು ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಿ ಅಮಾನತು ಪಡಿಸಿಕೊಂಡೆನು. ಆ ಬಗ್ಗೆ ಮಧ್ಯಾಹ್ನ 12.30 ರಿಂದ 2.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅದಕ್ಕೆ ಮೇಲೆ ಹೇಳಿದ ಪಂಚರ, ಆರೋಪಿಯ ಮತ್ತು ದಸ್ತುರುದಾರರ ಸಹಿಯನ್ನು ಪಡೆದಿದ್ದೇನೆ. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿದ್ದೇನೆ ಮತ್ತು ವಿಡಿಯೋ ಚಿತ್ರಿಕರಣ ಮಾಡಿಸಿದ್ದೇನೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.16 ರಿಂದ ಪಿ.21 ಎಂದು ಗುರುತಿಸಲಾಗಿರುತ್ತದೆ. ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಬಿ) ಎಂದು ಗುರುತಿಸಲಾಯಿತು.

14. ನಂತರ ಠಾಣೆಗೆ ಹಿಂತಿರುಗಿ ಮೇಲೆ ಹೇಳಿದ ಪಂಚನಾಮೆಯ ಕಾಲಕ್ಕೆ ವಶಪಡಿಸಿಕೊಂಡ ವಸ್ತುಗಳನ್ನು ಮಾಲುಪಟ್ಟಿ ಸಂಃ 371/2021 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.45 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.45(ಎ) ಎಂದು ಗುರುತಿಸಲಾಯಿತು. ಸದರಿ ಕತ್ತಿ, ಚಾಕು, ಶರ್ಟು ಮತ್ತು ಪ್ಯಾಂಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು

ಈಗಾಗಲೇ ಮು.ಮಾ.8 ರಿಂದ 11 ಎಂದು ಗುರುತಿಸಲಾಗಿರುತ್ತದೆ. ಮು.ಮಾ.8 ರಿಂದ 11 ರ ಮೇಲೆ ಅಂಟಿಸಲಾಗಿರುವ ಚೀಟಿಗಳ ಮೇಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.8(ಬಿ) ರಿಂದ ಮು.ಮಾ.11(ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದೆನು.

15. ಅದೇ ದಿನ ಅಂದರೆ ದಿಃ 20-11-2021 ರಂದು ಪ್ರಾಸಾ.8 ರವರ ಹೇಳಿಕೆಯನ್ನು ಪಡೆದುಕೊಂಡೆನು ಮತ್ತು ಪ್ರಾಸಾ.17 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡೆನು. ಸದರಿ ದೃಢೀಕರಣ ಪತ್ರವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.38 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.38(ಬಿ) ಎಂದು ಗುರುತಿಸಲಾಯಿತು.

16. ದಿಃ 29-11-2021 ರಂದು ಮೃತ ಶೇಷಪ್ಪ ಮತ್ತು ಆರೋಪಿಯ ಜಾತಿ ಪ್ರಮಾಣಪತ್ರವನ್ನು ನೀಡುವಂತೆ ಮೂಡಿಗೆರೆ ತಹಸೀಲ್ದಾರ್ ಮತ್ತು ಕಡೂರು ತಹಸೀಲ್ದಾರ್ ರವರಿಗೆ ಮನವಿಗಳನ್ನು ಸಲ್ಲಿಸಿದೆನು. ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರ ಪಹಣಿಯನ್ನು ನೀಡುವಂತೆ ಕೋರಿ ಚಿಕ್ಕಮಗಳೂರು ತಹಸೀಲ್ದಾರ್ ರವರಿಗೆ ಮನವಿ ಸಲ್ಲಿಸಿದೆನು.

ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.46 ಎಂದು ಸಾಕ್ಷಿಯ ಸಹಿಯನ್ನು ನಿಪಿ.46(ಎ) ಎಂದು ಗುರುತಿಸಲಾಯಿತು.

17. ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿಯನ್ನು ಸಲ್ಲಿಸಿದೆನು. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.27 ಎಂದು ಗುರುತಿಲಸಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು.

18. ಮೃತನ ಮರಣೋತ್ತರ ಪರೀಕ್ಷಾ ಕಾಲದಲ್ಲಿ ವೈದ್ಯರು ಸಂಗ್ರಹಿಸಿದ್ದ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ಮತ್ತು ಮರಣೋತ್ತರ ಪರೀಕ್ಷಾ ವರದಿಯನ್ನು ಚಾಸಾ.30 ರುದ್ರೇಶ್ ರವರು ಪಡೆದುಕೊಂಡು ದಿಃ 30-11-2021 ರಂದು ನನ್ನ ಮುಂದೆ ಹಾಜರುಪಡಿಸಿದರು. ಸದರಿ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆಃ 385/2021 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಾಲುಪಟ್ಟಿಯನ್ನು ನಿಪಿ.47 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.47(ಎ) ಎಂದು ಗುರುತಿಸಲಾಯಿತು. ಸದರಿ

ಮರಣೋತ್ತರ ಪರೀಕ್ಷಾ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.48 ಎಂದು ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.48(ಎ) ಎಂದು ಗುರುತಿಸಲಾಯಿತು.

19. ಮೇಲೆ ಹೇಳಿದಂತೆ ಅಮಾನತುಪಡಿಸಿಕೊಂಡಿದ್ದ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ಚಾಸಾ.32 ರವರ ಮುಖಾಂತರ ದಿಃ 02-12-2021 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ಕಳುಹಿಸಿಕೊಟ್ಟೆನು. ಅದೇ ದಿನ ಚಾಸಾ.22 ರವರು ನೀಡಿದ ಹಿರೇಕೊಳಲೆ ಗ್ರಾಮದ ಸರ್ವೆ ನಂಬರು 212/2 ಕ್ಕೆ ಸಂಬಂದಿಸಿದ ಪಹಣಿಯನ್ನು ಪತ್ರದೊಂದಿಗೆ ಪಡೆದುಕೊಂಡೆನು. ಸದರಿ ಪಹಣಿ ಮತ್ತು ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.33 ಎಂದು ಗುರುತಿಸಲಾಗಿದ್ದು ನಿಪಿ.33 ರಲ್ಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

20. ಚಾಸಾ.32 ರವರು ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಗೆ ತಲುಪಿಸಿದ ಬಗ್ಗೆ ದಿಃ 04-12-2021 ರಂದು ಹಿಂಬರಹವನ್ನು ತಂದು ಹಾಜರುಪಡಿಸಿದರು. ಸದರಿ ಹಿಂಬರಹವನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.49 ಎಂದು ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ.49(ಎ) ಎಂದು ಗುರುತಿಸಲಾಯಿತು.

21. ದಿಃ 06-12-2021 ರಂದು ಕೃತ್ಯ ನಡೆದ ಸ್ಥಳ ಮತ್ತು

ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡುವಂತೆ ಚಾಸಾ.23 ರವರಿಗೆ ಮನವಿ ಸಲ್ಲಿಸಿದೆನು. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.50 ಎಂದು ಸಾಕ್ಷಿಯ ಸಹಿಯನ್ನು ನಿಪಿ.50(ಎ) ಎಂದು ಗುರುತಿಸಲಾಯಿತು.

22. ದಿಃ 13-12-2021 ರಂದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪತ್ರದೊಂದಿಗೆ ಫ್ರಾಸಾ.12 ರವರಿಂದ ಪಡೆದುಕೊಂಡೆನು. ಸದರಿ ಪತ್ರ ಮತ್ತು ನಕಾಶೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.28 ಮತ್ತು ಪಿ.29 ಎಂದು ಗುರುತಿಸಲಾಗಿದ್ದು ನಿಪಿ.29 ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

23. ದಿಃ 15-12-2021 ರಂದು ಫ್ರಾಸಾ.13 ರವರಿಂದ ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರಲ್ಲಿರುವ ಕಾಫಿ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಗಳ ಅಸೆಸಮೆಂಟ್ ರಿಜಿಸ್ಟರಿನ ದೃಢೀಕೃತ ಪ್ರತಿಯನ್ನು ಪತ್ರದೊಂದಿಗೆ ಪಡೆದುಕೊಂಡೆನು. ಸದರಿ ದಾಖಲೆಗಳನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.31 ಮತ್ತು ಪಿ.32 ಎಂದು ಗುರುತಿಸಲಾಗಿದ್ದು ನಿಪಿ.31 ಸಾಕ್ಷಿಯ ಸಹಿಯನ್ನು ನಿಪಿ.31(ಬಿ) ಎಂದು ಗುರುತಿಸಲಾಯಿತು.

24. ದಿಃ 24-12-2021 ರಂದು ಚಾಸಾ.23 ರವರಿಂದ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ವರದಿ ಪಡೆದುಕೊಂಡೆನು. ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.51 ಎಂದು ಸಾಕ್ಷಿಯ ಸಹಿಯನ್ನು ನಿಪಿ.51(ಎ) ಎಂದು ಗುರುತಿಸಲಾಯಿತು.

25. ದಿಃ 07-01-2022 ರಂದು ಚಾಸಾ.17 ರವರಿಂದ ಆರೋಪಿಯ ಜಾತಿಯ ಬಗ್ಗೆ ವರದಿಯನ್ನು ಪಡೆದುಕೊಂಡೆನು. ಸದರಿ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.23 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು.

26. ದಿಃ 29-01-2022 ರಂದು ಫ್ರಾಸಾ.11 ರವರಿಂದ ಮೃತ ಶೇಷಪ್ಪರವರ ತಂದೆಯ ಜಾತಿ ಪ್ರಮಾಣಪತ್ರದ ಆನ್ ಲೈನ್ ಪ್ರತಿಯನ್ನು ಪಡೆದುಕೊಂಡೆನು. ಸದರಿ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.25 ಎಂದು ಗುರುತಿಸಲಾಗಿದೆ.

27. ದಿಃ 31-01-2022 ರಂದು ಪ್ರಕರಣಕ್ಕೆ ಎಸ್.ಸಿ/ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆಯ ಕಲಂ 3(1)(ಎಸ್) ಮತ್ತು 3(2)(v) ಗಳನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲು ಕೋರಿ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಆದೇಶ ಪಡೆದೆನು. ಸದರಿ

ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.52 ಎಂದು ಸಾಕ್ಷಿಯ ಸಹಿಯನ್ನು ನಿಪಿ.52(ಎ) ಎಂದು ಗುರುತಿಸಲಾಯಿತು.

28. ದಿಃ 05-02-2022 ರಂದು ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.40 ರವರಿಗೆ ನೀಡಿದೆನು. ಈ ದಿನ ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ಆರೋಪಿ ಪರ ಶ್ರೀ ಪಿ.ಇ.ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಾಕ್ಷಿಯು ತಾನು ಮೈಸೂರಿನಿಂದ ಬಂದಿರುವುದಾಗಿ, ತನಗೆ ಲಿಗಮೆಂಟ್ ಟೇರ್ ಆಗಿರುವುದಾಗಿ, ಬಸ್ಸಿನಲ್ಲಿ ಅಥವಾ ಯಾವುದೇ ಸಾರ್ವಜನಿಕ ವಾಹನದಲ್ಲಿ ಚಲಿಸಲು ಆಗುವುದಿಲ್ಲ ಎಂದು, ತಾನು ಈ ದಿನ ಇಲ್ಲಿಗೆ ಬರಲು ಸರ್ಕಾರಿ ವಾಹನದ ಸೌಲಭ್ಯ ಇಲ್ಲದಿರುವ ಕಾರಣ ತಾನು ತನ್ನ ಖಾಸಗಿ ವಾಹನದಲ್ಲಿ ಬಂದಿರುವುದಾಗಿ ತಿಳಿಸಿ ಪಾಟೀ ಸವಾಲಿಗೆಂದು ಮತ್ತೊಂದು ದಿನ ಆ ರೀತಿ ವ್ಯವಸ್ಥೆ ಮಾಡಿಕೊಂಡು ಬರಲು ಕಷ್ಟವಾಗುತ್ತದೆ ಎಂದು ತಿಳಿಸಿ ಪಾಟೀ ಸವಾಲಿಗೆ ತಾನು ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರ ಹಾಜರಾಗಲು ಅನುಮತಿ ಕೋರಿರುತ್ತಾರೆ. ಆರೋಪಿ ಪರ

ವಕೀಲರು ತಾವು ಸಾಕ್ಷಿಯ ಪಾಟೀ ಸವಾಲನ್ನು ವಿಡಿಯೋ ಕಾನ್ಪರೇನ್ಸಿಂಗ್ ಮುಖಾಂತರವೇ ಮಾಡುವುದಾಗಿ ತಿಳಿಸಿ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ